ದೇಶವು ಎಂಟಿ ಡಂಪಿಂಗ್ ಶುಲ್ಕ ಸೇರಿ ಕನಿಷ್ಠ 33.19 ರ ಅಮೇರಿಕನ್ ಡಾಲರ್‌ಗಳಿಗೆ ಕಡಿಮೆ ಇಲ್ಲದ ದರದಲ್ಲಿ 2ಎ ಮತ್ತು ಅದಕ್ಕಿಂತ ಕಡಿಮೆ ಗುಣಮಟ್ಟದ ರೇಷ್ಮೆಯನ್ನು ಭಾರತ ದೇಶಕ್ಕೆ ರಫ್ತು ಮಾಡಬಹುದೆಂದು ಅಧಿಸೂಚಿಸಿದೆ. ಇದರಿಂದ ರಾಜ್ಯದ ರೇಷ್ಮೆ ಗೂಡಿನ : ಕಚ್ಚಾ ರೇಷ್ಮೆಯ ಧಾರಣೆಗಳಲ್ಲಿ ಏರಿಕೆ ಕಂಡು ಬಂದು ರಾಜ್ಯದ ರೇಷ್ಮೆ ಉದ್ಯಮವು ಅಭಿವೃದ್ಧಿ ಹೊಂದಬಹುದೆಂದು ಆಶಾಕಿರಣ ಮೂಡಿದೆ.

ಬೈಲಹೊಂಗಲ, ಸವದತ್ತಿಗಳಲ್ಲಿ ಅಂತರ್ಜಲ ಹೆಚ್ಚಿಸುವುದು

1112 (1275) ಶ್ರೀ ಕೌಜಲಗಿ ಮಹಾಂತೇಶ್ ಶಿವಾನಂದ (ಬೈಲಹೊಂಗಲ) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ತಾಲ್ಲೂಕುಗಳಲ್ಲಿ ಅಂತರ್ಜಲ ಕಡಿಮೆ ಇರುವುದರಿಂದ ಕಪ್ಪು ಪ್ರದೇಶಗಳೆಂದು ಘೋಷಿಸಲಾಗಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು) ?

ಆ) ಬೆಳಗಾವಿ ಜಿಲ್ಲೆಯಲ್ಲಿ ಯಾವ-ಯಾವ ತಾಲ್ಲೂಕುಗಳಲ್ಲಿ ಅಂತರ್ಜಲ ಕಡಿಮೆ ಇರುವುದರಿಂದ ಕಪ್ಪು ಪ್ರದೇಶಗಳೆಂದು ಘೋಷಿಸಲಾಗಿದೆ ?

ಇ) ಈ ಘೋಷಿತ ತಾಲ್ಲೂಕುಗಳಲ್ಲಿ ಅಂತರ್ಜಲ ಹೆಚ್ಚಿಸಲು ಯಾವ-ಯಾವ ವಿಶೇಷ ಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ ; ಹಣಕಾಸಿನ ಯಾವ ವ್ಯವಸ್ಥೆಯನ್ನು ಮಾಡಲಾಗಿದೆ ?

ಈ) ಬೈಲಹೊಂಗಲ ಹಾಗೂ ಸವದತ್ತಿ ತಾಲ್ಲೂಕುಗಳಲ್ಲಿ ಅಂತರ್ಜಲ ಹೆಚ್ಚಿಸಲು ಯಾವ-ಯಾವ ಕೆಲಸಗಳನ್ನು ತೆಗೆದುಕೊಳ್ಳಲಾಗಿದೆ ; ಅವು ಈಗ ಯಾವ ಹಂತದಲ್ಲಿದೆ ?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು 21 ತಾಲ್ಲೂಕುಗಳನ್ನು ಕಪ್ಪು ಮತ್ತು 22 ತಾಲ್ಲೂಕುಗಳನ್ನು ಬೂದು ಪ್ರದೇಶಗಳೆಂದು ಘೋಷಿಸಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ) ಬೆಳಗಾವಿ ಜಿಲ್ಲೆಯಲ್ಲಿ ಚಿಕ್ಕೋಡಿ ಮತ್ತು ಹುಕ್ಕೇರಿ ತಾಲ್ಲೂಕುಗಳನ್ನು ಕಪ್ಪು ಪ್ರದೇಶ ಗಳೆಂದು ಘೋಷಿಸಲಾಗಿದೆ.

ಇ) ಬೆಳಗಾವಿ ಜಿಲ್ಲೆಯಲ್ಲಿ ಅಂತರ್ಜಲ ಮಟ್ಟವನ್ನು ಹೆಚ್ಚಿಸಲು ಇಲಾಖೆಯು ಕ್ಲಿಷ್ಟಕರವಾದ ಪ್ರದೇಶಗಳಲ್ಲಿ ವಿವಿಧ ಅಂತರ್ಜಲ ಕೃತಕ ಮರು ಪೂರೈಕೆ ರಚನೆಗಳನ್ನು ನಿರ್ಮಾಣ ಕಾರ್ಯಕ್ರಮವನ್ನು ಹಮ್ಮಿಕೊಂಡು ಒಟ್ಟು 62 ಸಂಖ್ಯೆಯ ವಿವಿಧ ರಚನೆಗಳನ್ನು ನಿರ್ಮಾಣ ಮಾಡಲಾಗಿದೆ. ಜಲಸಂಪನ್ಮೂಲ ಕ್ರೋಢೀಕರಣ ಯೋಜನೆ - ಅಂತರ್ಜಲ ಭಾಗ (Water Resources Consolidation Project - Ground Water Component) ಯಡಿಯಲ್ಲಿ ಕಾರ್ಯಕ್ರಮವನ್ನು ರೂಪಿಸಲಾಗಿದ್ದು, ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು 5979 ರಚನೆಗಳನ್ನು ನಿರ್ಮಾಣ ಮಾಡಲು ಯೋಜಿಸಲಾಗಿದೆ. ಇದಕ್ಕೆ ಯೋಜಿಸಿರುವ ಅಂದಾಜು ವೆಚ್ಚ ರೂ. 4717.80 ಲಕ್ಷಗಳು.

ಈ) ಬೈಲಹೊಂಗಲ ತಾಲ್ಲೂಕಿನಲ್ಲಿ ಅಂತರ್ಜಲ ಮಟ್ಟವನ್ನು ಹೆಚ್ಚಿಸಲು 17 ಸಂಖ್ಯೆಯ ವಿವಿಧ ಅಂತರ್ಜಲ ಕೃತಕ ಮರು ಪೂರೈಕೆ ರಚನೆಗಳನ್ನು ನಿರ್ಮಾಣ ಮಾಡಲಾಗಿದೆ. ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ. ಸವದತ್ತಿ ತಾಲ್ಲೂಕು ಬಿಳಿ ಪ್ರದೇಶವಾಗಿರುವುದರಿಂದ ಯಾವುದೇ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ.

ಅನುಬಂಧ - 1

ಕ್ಲಿಷ್ಟಕರವೆಂದು ಪರಿಗಣಿಸಲಾದ ತಾಲ್ಲೂಕುಗಳಲ್ಲಿ ಅಂತರ್ಜಲ ಅಭಿವೃದ್ಧಿಯ ಸ್ಥಾನ-ಮಾನ

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಬೂದು ತಾಲ್ಲೂಕು	ಕಪ್ಪು ತಾಲ್ಲೂಕು	ಷರಾ
1	ಬೆಂಗಳೂರು ನಗರ		ಆನೇಕಲ್ಲು ಬೆಂಗಳೂರು ಉತ್ತರ ಬೆಂಗಳೂರು ದಕ್ಷಿಣ	
2	ಬೆಂಗಳೂರು ಗ್ರಾಮಾಂತರ	ದೊಡ್ಡಬಳ್ಳಾಪುರ ರಾಮನಗರ	ಚನ್ನಪಟ್ಟಣ ದೇವನಹಳ್ಳಿ ಹೊಸಕೋಟೆ	
3	ಬೆಳಗಾಂ	ಅಥಣಿ ಬೈಲಹೊಂಗಲ	ಚಿಕ್ಕೋಡಿ ಹುಕ್ಕೇರಿ	
4	ಬಳ್ಳಾರಿ	ಹಗರಿಬೊಮ್ಮನಹಳ್ಳಿ		
5	ಬೀದರ	ಬೀದರ		
6	ಬಿಜಾಪುರ	ಬಾಗೇವಾಡಿ ಬಿಜಾಪುರ	ಇಂಡಿ	
8	ಚಿತ್ರದುರ್ಗ	ಚಳ್ಳಕೆರೆ ಚಿತ್ರದುರ್ಗ		
9	ದಕ್ಷಿಣ ಕನ್ನಡ	ಬೆಳ್ತಂಗಡಿ	ಬಂಟ್ವಾಳ ಸುಳ್ಯ	
10	ಹಾಸನ	ಅರಸೀಕೆರೆ	ಚನ್ನರಾಯಪಟ್ಟಣ	
11	ಕೋಲಾರ	ಚಿಂತಾಮಣಿ ಗೌರಿಬಿದನೂರು ಮುಳಬಾಗಿಲು ಶಿಡ್ಲಘಟ್ಟ ಶ್ರೀನಿವಾಸಪುರ	ಚಿಕ್ಕಬಳ್ಳಾಪುರ ಕೋಲಾರ ಮಾಲೂರು	
12	ಚಾಮರಾಜನಗರ	ಚಾಮರಾಜನಗರ	ಕೊಳ್ಳೇಗಾಲ	
13	ಕೊಪ್ಪಳ	ಕುಷ್ಟಗಿ		
14	ತುಮಕೂರು	ಕೊರಟಗೆರೆ ಕುಣಿಗಲ್ಲು ಶಿರಾ	ಗುಬ್ಬಿ ಮಧುಗಿರಿ ತಿಪಟೂರು ತುಮಕೂರು ತುರೇವೆಕೆರೆ	
	ಒಟ್ಟು	22	21	